# ತಂತ್ರಜ್ಞಾನ ಯುಗದಲ್ಲಿ ಸಾಹಿತ್ಯ ಸೃಷ್ಟಿಯ ಸಾಂಸ್ಕೃತಿಕ ಮಹತ್ವ

ಎಲ್.ಎಸ್. ಪಡತಾರೆ

ಶ್ರೀಮತಿ ಅ. ಅ. ಪಾಟೀಲ ಕಲಾ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ಚಿಕ್ಕೋಡಿ.

DOI: https://doi.org/10.5281/zenodo.17254871

## ABSTRACT:

ಪ್ರಸ್ತುತದಲ್ಲಿ ತಂತ್ರಜ್ಞಾನವು ಮನುಷ್ಯನನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಮಹಾಪಥವಾಗಿದೆ. ಲೋಕದಲ್ಲಿ ಮಾನವ ಜೀವನವು ಸಂಪೂರ್ಣವಾಗಿ ತಾಂತ್ರಿಕ ನೆಲೆಗಟ್ಟಿನಲ್ಲಿ ನಿಂತಂತಿದೆ. ತಂತ್ರಜ್ಞಾನವೆನ್ನುವುದು ಮನುಷ್ಯನ ಉದ್ಧಾರಕ್ಕೆ ಇರುವ ಹೆಬ್ಬಾಗಿಲಾದರೂ, ಅವನ ಒಳಿತಿಗಾಗಿ ಸರಿಯಾದ ದಾರಿಯನ್ನು ಸೃಷ್ಟಿಸುವ ನೈಜಶಕ್ತಿ ತಂತ್ರಜ್ಞಾನಕ್ಕಿಲ್ಲ. ಬೌದ್ಧಿಕವಾಗಿ ಮನುಷ್ಯ ಎಡವಿದಾಗ ತಂತ್ರಜ್ಞಾನವು ತಾತ್ಕಾಲಿಕವಾದ ಪರಿಹಾರವನ್ನು ಸೂಚಿಸಬಹುದು. ಆದರೆ ಆದ ಗಾಯಕ್ಕೆ ಸೂಕ್ಷ್ಮಸಂವೇದನೆಯ ಔಷಧಿಯನ್ನು ನೀಡುವ ಶಕ್ತಿ ತಂತ್ರಜ್ಞಾನಕ್ಕಿಲ್ಲ ಎಂಬುದು ಅಷ್ಟೇ ಸತ್ಯವಾಗಿದೆ. ಆದರೆ ಆಯಾ ಕಾಲದ ಸಾಹಿತ್ಯದ ಸೃಷ್ಟಿಯು ಮನುಷ್ಯನಿಗಾದ ನೋವನ್ನು ಶಮನಮಾಡುವ ಶಕ್ತಿಯನ್ನು ಹೊಂದಿದೆ. ಆ ಕಾರಣದಿಂದ ಸಾಹಿತ್ಯವನ್ನು ಅನುಭವ ಜನ್ಯದ "ಅನುಭವಾಮೃತ"ವೆಂದು ಹಿರಿಯರು ಸಂಬೋಧಿಸಿದ್ದಾರೆ. ಹಿಂದಿನ ಸಂಪ್ರದಾಯದ ಯುಗಕ್ಕೂ ಇಂದಿನ ತಂತ್ರಜ್ಞಾನದ ಯುಗಕ್ಕೂ ಅಗಾಧವಾದ ವ್ಯತ್ಯಾಸವನ್ನು, ನಮ್ಮ ಇಂದಿನ ಜೀವನ ಶೈಲಿಯಿಂದ ಕಂಡುಕೊಂಡಿದ್ದೇವೆ. ಮಾನವ ಜನಾಂಗವು ಅನೇಕ ಬದಲಾವಣೆಯ ಮಹಾಪರ್ವಗಳನ್ನು ಆಧರಿಸಿ ಅಭಿವೃದ್ಧಿಯೆಂದು ಹೇಳುವ ನಮ್ಮ ಈ ಸಮಾಜ ಆಂತರಿಕವಾದ ಗಟ್ಟಿತನವನ್ನು ಎಷ್ಟರಮಟ್ಟಿಗೆ ಸಾಧಿಸಿಕೊಂಡಿದೆ ಎಂಬುದನ್ನು ನಾವು ಪ್ರಶ್ನೆ ಮಾಡಿದಾಗ ಅದಕ್ಕೆ ನಮ್ಮ ಸೃಜನಶೀಲ ಸಾಹಿತ್ಯವು ಬಹುದೊಡ್ಡ ಮಟ್ಟದ ಉತ್ತರವನ್ನು ನೀರಸವೆಂಬಂತೆ ಸೂಚಿಸುವುದನ್ನು ಕಳೆದ ಎರಡು ದಶಕದಿಂದ ನೋಡುತ್ತಿದ್ದೇವೆ. ಈ ಲೇಖನದಲ್ಲಿ ನಾನು ತಾಂತ್ರಿಕ ಯುಗವೊಂದರಲ್ಲಿ ಸಾಹಿತ್ಯವು ಯಾವೆಲ್ಲ ಹಿನ್ನೆಲೆಯಿಂದ ಹೊಸಹೊಸ ರೂಪವನ್ನು ಪಡೆಯುತ್ತದೆ ಎಂಬುದನ್ನು ಚರ್ಚೆ ಮಾಡುತ್ತ, ಸತ್ವಭರಿತವಾದ ಸಾಹಿತ್ಯ ಸೃಷ್ಟಿಯ ಹಿನ್ನೆಲೆ ಮುನ್ನಲೆಗಳನ್ನು ವಿವರಿಸಲು ಇಚ್ಛಿಸುತ್ತೇನೆ. ಜೊತೆಗೆ ಬರವಣಿಗೆಗೆ ಇರುವ ಪ್ರಖರವಾದ ಶಕ್ತಿ ಎಂಥಹದ್ದು ಎಂಬುದನ್ನು ಇಲ್ಲಿ ತೋರಿಸಲು ಪ್ರಯತ್ನಿಸುತ್ತೇನೆ.

## KEYWORDS:

ತಂತ್ರಜ್ಞಾನ, ಬೌದ್ಧಿಕತೆ, ಸೂಕ್ಷ್ಮಸಂವೇದನೆ, ಗಟ್ಟಿತನ, ಸಂಪ್ರದಾಯ, ಪರಂಪರೆ, ನೀರಸ, ಸತ್ವಭರಿತ, ಸೃಜನಶೀಲ.

ಕನ್ನಡ ಸಾಹಿತ್ಯವು ಪ್ರಾಚೀನ ಕಾಲದಿಂದ ಆಯಾ ಕಾಲಘಟ್ಟಗಳ ಸಮಸ್ಯೆಗಳಿಗೆ, ಜೀವನದ ಸಂಘರ್ಷಗಳಿಗೆ ಪರಿಹಾರವನ್ನು ಸೂಚಿಸುತ್ತ ಸಮೃದ್ಧವಾಗಿ ಬೆಳೆದುನಿಂತಿರುವುದನ್ನು ನಾವು ಗಮನಿಸಿದ್ದೇವೆ. ಪಂಪನ ಕಾಲದಿಂದ ಕುವೆಂಪುರವರ ಕಾಲದವರೆಗೆ ಸುದೀರ್ಘವಾಗಿ ಬೆಳೆದುಬಂದ ಕನ್ನಡ ಸಾಹಿತ್ಯವು ಸಮೃದ್ಧವಾದ ಫಸಲನ್ನು ಉಣಬಡಿಸಿದೆ. ಆದರೆ ಇಂದಿನ ತಂತ್ರಜ್ಞಾನ ಯುಗವನ್ನು ನಾವು ಒಮ್ಮೆ ಯೋಚಿಸಿದಾಗ ಈ ಕಾಲದ ಸಂವೇದನೆ ಯಾವುದು ಎಂಬುದರ ಪ್ರಶ್ನೆ ನಮಗೆ ಎದುರಾಗುತ್ತದೆ. ಪ್ರಕೃತದ ಜೀವನದ ಶೈಲಿಯನ್ನು ಅವಲೋಕನ ಮಾಡಿದಾಗ ಒಬ್ಬ ಬರಹಗಾರ ಏನನ್ನು ಆಧರಿಸಿ ಅಥವಾ ಯಾವ ಸಮಸ್ಯೆಯನ್ನು ಕೇಂದ್ರವಾಗಿ ಇಟ್ಟುಕೊಂಡು ಹೊಸ ಓದುಗರನ್ನು ಸಾಹಿತ್ಯದ ಕಡೆಗೆ ಸೆಳೆಯಲು ಹೇಗೆ ಪ್ರಯತ್ನಿಸುತ್ತಾನೆ ಎಂಬುದು ಪ್ರಶ್ನಾರ್ಥಕವಾಗಿದೆ. ಯಾಕೆಂದರೆ ಮೇಲುನೋಟಕ್ಕೆ ಒಮ್ಮೆ ನಮ್ಮ ಸಮಾಜವನ್ನು ನೋಡಿದಾಗ ಇಲ್ಲಿ ಎಲ್ಲವೂ ಇದೆ ಎಂಬ ಭಾವ; ಆದರೆ ಆಂತರ್ಯದ ಮೌಲ್ಯವನ್ನು ಅರಸಿ ಹೋದಾಗ ಎಲ್ಲವೂ ಶೂನ್ಯವೆಂಬಂತೆ ಭಾಸವಾಗುತ್ತದೆ. ನಮ್ಮ ಜೀವನ ವಿಧಾನವೇ ಯಾಂತ್ರಿಕ ನಿಯಮಾವಳಿಗೆ ಒಳಪಟ್ಟಿರುವುದರಿಂದ ಬದುಕಿನ ಕ್ರಿಯಾಶೀಲತೆಯ ಜ್ಞಾನವು ಯಂತ್ರದಂತೆ ವ್ಯವಹರಿಸುತ್ತಿದೆ. ಇದರಿಂದ ಮನುಷ್ಯನ ಸೃಜನಶೀಲ ಶಕ್ತಿಯು ದಿನದಿಂದ ದಿನಕ್ಕೆ ನಶಿಸುತ್ತಿದೆ. ಎಲ್ಲಾ ಸೌಲಭ್ಯಗಳನ್ನು ಹೊಂದಿದ ಈ ಯುಗದಲ್ಲಿ ನಾವು ಅತ್ಯುತ್ಕೃಷ್ಟವಾದ ಸಾಹಿತ್ಯವನ್ನು ಸೃಷ್ಟಿಸುವ ಪಥದಲ್ಲಿ ಸಾಗಬೇಕಿತ್ತು. ಆದರೆ ಅದರ ವಿರುದ್ಧವೆಂಬಂತೆ ಸಾಗುತ್ತಿದ್ದೇವೆ. ಕಾರಣ ಯಾವಾಗಲೂ ಅತಿಯಾದ ಸೌಲಭ್ಯದಿಂದ ಕೂಡಿದ ನಮ್ಮ ತಾಂತ್ರಿಕ ವ್ಯವಸ್ಥೆ.

ವಿಜ್ಞಾನ ಮತ್ತು ತಂತ್ರಜ್ಞಾನವು ಬೌದ್ಧಿಕವಾದ ತಿಳಿವಳಿಕೆಯ ಮಹಾಮಾರ್ಗವಾದರೂ ಸಾಹಿತ್ಯವು ಭಾವನಾತ್ಮಕವಾದ ತಿರುಳಾಗಿದೆ. ತಂತ್ರಜ್ಞಾನ ಅಥವಾ ಯಾಂತ್ರಿಕತೆ ಎಂಬುದು ನಮಗೆ ಅನೇಕ ಸೌಲಭ್ಯಗಳನ್ನು ನೀಡಿ ನಮ್ಮ ಸಮಾಜವನ್ನು ಅತಿ ವೇಗದಿಂದ ನಡೆಯುವಂತೆ ಮಾಡಬಹುದು. ಯಾಂತ್ರಿಕತೆಯು ಸೃಷ್ಟಿಸಿರುವ ಈ ಅತಿವೇಗಕ್ಕೆ ಬೌದ್ಧಿಕವಾದ ದಾರಿದ್ರ್ಯವು ಆವರಿಸುತ್ತಿದೆ. ಬೌದ್ಧಿಕ ದಾರಿದ್ರ್ಯದಿಂದಾಗಿ ಲೋಕಜೀವನದ ವ್ಯವಸ್ಥೆಯ ಗುಣವು ತನ್ನ ಸಬಲತೆಯನ್ನು ಕಳೆದುಕೊಳ್ಳುತ್ತಿದೆ. ಇದರಿಂದ ಸಾಮಾಜಿಕ ಸುವ್ಯವಸ್ಥೆಯು ಪತನದತ್ತ ಸಾಗುತ್ತದೆ. ಸಾಮಾಜಿಕ ಪತನವು ಅರಾಜಕತೆಯನ್ನು ನಿರ್ಮಿಸುತ್ತದೆ. ಅನೇಕ ಸಮಸ್ಯೆಗಳಿಂದ ನಿರ್ಮಿತವಾದ ಅರಾಜಕತೆಯನ್ನು ನಾವು ನಂಬುವ ವಿಜ್ಞಾನಕ್ಕೆ ಪರಿಹರಿಸುವ ಶಕ್ತಿಯಿಲ್ಲ. ಆದರೆ ಸಾಹಿತ್ಯದ ನೈಜತೆಯ ಸಾಂಸ್ಕೃತಿಕ ಮೌಲ್ಯಕ್ಕೆ ಅರಾಜಕತೆಯನ್ನು ಹೊಗಲಾಡಿಸುವ ಶಕ್ತಿಯಿದೆ. ಯಾವುದೋ ಒಂದು ಅಮೂಲ್ಯವಾದ ಬರಹ ಇದೊಂದೇ ಉದ್ದೇಶವನ್ನು ಇಟ್ಟುಕೊಂಡು ರಚನೆಯಾಗಿರುವುದಿಲ್ಲ. ಆದರೆ ಉತ್ತಮ

ಬರಹವು ಸಕಲಗುಣಗಳಿಂದ ಮೂರ್ತವಾಗಿರುವುದರಿಂದ ಮತ್ತು ಜೀವನದ ಉದ್ಧಾರವೇ ಪರಮ ಗುಣವಾಗಿರುವುದರಿಂದ ಅದಕ್ಕೆ ಅರಾಜಕತೆಯನ್ನು ತೊಡೆದುಹಾಕುವ ಶಕ್ತಿಯಿದೆ. ಜೊತೆಗೆ ಸಾಹಿತ್ಯವು ಒಂದು ಯುಗದ ಜನಜೀವನದಲ್ಲಿನ ಓರೆಕೋರೆಗಳನ್ನು ತಿದ್ದಿ ಸರಿದಾರಿಗೆ ತರುವ ಶಕ್ತಿ ಇರುವುದರಿಂದ ಸಾಹಿತ್ಯ ಎಲ್ಲಾ ಕಾಲಕ್ಕೂ ಶಾಶ್ವತ ಸತ್ಯದ ಪ್ರತಿಮೆಗಳಾಗಿದೆ. ಈ ಕಾರಣದಿಂದ ಯಾಂತ್ರಿಕತೆಯು ಬೌದ್ಧಿಕವಾದ ಆಸ್ತಿಯಾದರೆ, ಸಾಹಿತ್ಯವು ಸಾಂಸ್ಕೃತಿಕವಾದ ಆಸ್ತಿಯೆಂದು ನಿರ್ಧಾರಿತವಾಗಿ ಹೇಳಬಹುದು.

ನನ್ನ ದೃಷ್ಟಿಯಲ್ಲಿ ಸಾಹಿತ್ಯಕ್ಕೂ ವಿಜ್ಞಾನಕ್ಕೂ ಅನೇಕ ಸುರಕ್ಷಿತವಾದ ಅಂತರಗಳಿದ್ದರೂ ತಿಳಿವಳಿಕೆ ಎನ್ನುವ ಹೊಳಪಿನಿಂದಾಗಿ ತಂತ್ರಜ್ಞಾನವು ವಿಚಿತ್ರ ವಿಕೃತಿಯೊಂದಿಗೆ ಬೆಳೆದರೆ, ಸಾಹಿತ್ಯ ಸೊಗಸಾದ ಗತಿಯಲ್ಲಿ ಮೈದಳೆಯುತ್ತದೆ. ತಂತ್ರಜ್ಞಾನ ಯುಗದಲ್ಲಿ ಮಾನವ ಅತಿಯಾದ ಯಂತ್ರೋಪಕರಣಗಳ ಬಳಕೆಯಿಂದ, ಪ್ರಕೃತಿದತ್ತವಾದ ಜೀವನದಿಂದ ದೂರವಾಗುತ್ತಿದ್ದಾನೆ. ಇದರಿಂದ ಸಂಸ್ಕೃತಿಯು ನಾಶವಾಗಿ, ನಿರಂತರವಾಗಿರುವ ಪ್ರಗತಿಯ ದಿಕ್ಕುತಪ್ಪುತ್ತದೆ. ಆದರೆ ಅನೇಕ ಗುಣವಿಶೇಷತೆಗಳ ಮೂಲಕ ಸಾಹಿತ್ಯ ನಮಗೆ ನೈಜ ರೀತಿಯ ದಾರಿಯನ್ನು ತೋರಿಸಿಕೊಡಲು ಪ್ರಯತ್ನಿಸುತ್ತದೆ. ಸಾಹಿತ್ಯವು ನಿರ್ದಿಷ್ಟವಾದ ದೃಷ್ಟಿಕೋನವನ್ನು ಹೊಂದಿರುವುದರಿಂದ ಎಲ್ಲಾ ಕಾಲಕ್ಕೂ ಅದು ಸ್ವಾಗತಾರ್ಹವಾದ ಗುಣವನ್ನು ಪಡೆದಿರುತ್ತದೆ. ಆದರೆ ವೈಜ್ಞಾನಿಕ ಯುಗದ ತಂತ್ರಜ್ಞಾನವು ಉತ್ಸಾಹದೊಂದಿಗಿನ ಕ್ರಿಯೆಯಾಗಿ ಯೋಚನೆ ಮಾಡುವುದಕ್ಕಿಂತ "ಬಳಸುವ" ಪ್ರಕ್ರಿಯೆಯನ್ನು ಕಲಿಸುತ್ತದೆ. ಈ ಬಳಸುವ ಪ್ರಕ್ರಿಯೆಯನ್ನು ಅತಿಯಾಗಿ ನಂಬಿ ಸಾಗುತ್ತಿರುವ ಈ ತಲೆಮಾರಿನ ಜನತೆಯ ಜೀವನದ ಉದ್ದೇಶವು ಏನು ಎಂಬುದನ್ನು ಗ್ರಹಿಸಿದಾಗ ನಮಗೇ ಭಯವನ್ನುಂಟುಮಾಡುತ್ತದೆ. ಇಲ್ಲಿ ನಾನು "ಬಳಸುವ" ಎಂಬ ಪದವನ್ನು ಇಚ್ಛೆಯ ಪೂರ್ವಕವಾಗಿ ಉಲ್ಲೇಖಿಸಿರುವುದಕ್ಕೆ ಕಾರಣವಿದೆ. ಏನೆಂದರೆ ತಾಂತ್ರಿಕತೆಯು ನಮಗೆ ಬಳಕೆಯ ರೀತಿಯನ್ನು ಮಾತ್ರ ಕಲಿಸುತ್ತದೆ. ಆದರೆ ಬೆಳಕು ಅರ್ಥಾತ್ ಜ್ಞಾನವನ್ನು ನೀಡುವುದಿಲ್ಲ. ತಂತ್ರಜ್ಞಾನಕ್ಕೂ ಸಾಹಿತ್ಯಕ್ಕೂ ಇರುವ ಬಹಳ ಮಹತ್ವದ ಅಂಶವೇ ಅರಿವು. ಆ ಅರಿವಿಲ್ಲದೇ ನಾವು ಬದುಕುತ್ತಿರುವುದರಿಂದ ನಮ್ಮ ಜೀವನ ಯಾಂತ್ರಿಕವಾಗಿ ಸಾಗುತ್ತಿದೆ. ಈ ಯಾಂತ್ರಿಕತೆಯ ಬದುಕಿನಲ್ಲಿ ನಮ್ಮ ತನವನ್ನು ಮಾರಾಟ ಮಾಡಿಕೊಂಡು ಬದುಕುತ್ತಿದ್ದೇವೆ. ಇದನ್ನು ಒಂದು ದೃಷ್ಟಿಯಿಂದ ಯಾಂತ್ರಿಕವಾದ ಗುಲಾಮಗಿರಿಯೆಂದು ಕರೆಯಬಹುದು. ಈ ಗುಲಾಮಗಿರಿಯಲ್ಲಿ ನಮ್ಮ ಯಾವ ಹೊಸ ಸಾಂಸ್ಕೃತಿಕ ಆಲೋಚನೆಗಳು ಹುಟ್ಟಲು ಸಾಧ್ಯವೆನ್ನುವುದನ್ನು ಒಮ್ಮೆ ಮನನ ಮಾಡಬೇಕಾಗಿದೆ.

ಪ್ರಪಂಚದಲ್ಲಿ ಯಾಂತ್ರಿಕವಾದ ವ್ಯವಸ್ಥೆಯ ಮೇಲೆ ನಂಬಿಕೆ ಇಡುವುದೆಂದರೆ

ನಾವೇ ಕೈಗೊಳ್ಳುವ ಒಂದು ದೊಡ್ಡ ಅಪಾಯವಾಗಿದೆ. ಯಾಕೆಂದರೆ ಅದು ಗುಲಾಮಗಿರಿಯನ್ನು ಮಾತ್ರ ಸೃಷ್ಟಿಸುತ್ತಿಲ್ಲ. ಅದು ನಮ್ಮ ಇಡೀ ಮಾನವ ಸಂಕುಲದ ಜೀವನ ವಿಚಾರವನ್ನೇ ಬುಡಮೇಲು ಮಾಡುತ್ತಿದೆ. ಆದ್ದರಿಂದ ನಮ್ಮ ಯಾಂತ್ರಿಕ ವ್ಯವಸ್ಥೆಯು ಮನುಷ್ಯನನ್ನು ಕ್ಷುಲ್ಲಕವಾದ ಸ್ಥಿತಿಗೆ ನೂಕುತ್ತದೆ. ಮೌಲ್ಯರಹಿತವಾಗಿ ಬೆಳೆಸುತ್ತ ವಾಮ ಮಾರ್ಗದಲ್ಲಿ ಇಷ್ಟಾರ್ಥಗಳನ್ನು ಸಿದ್ಧಿಸಿಕೊಳ್ಳುವುದನ್ನು ಕಲ್ಪಿಸುತ್ತದೆ. ಭೌತಿಕ ವಸ್ತುಗಳ ಅನುಕೂಲತೆಯೆಡೆಗೆ ನಮ್ಮನ್ನು ಸೆಳೆದು ಅತ್ಯಮೂಲ್ಯವಾದ ಮನುಷ್ಯ ಜೀವನದ ಸಾಮರಸ್ಯದ ಸಂಪತ್ತಿನ ಅರಿವು ಬರದ ಹಾಗೆ ಬೆಳೆಸುತ್ತದೆ. ನೈಜವಾದ ಯಾವುದೋ ಆಲೋಚನೆ ನಮ್ಮೊಳಗಡೆ ಆವಿರ್ಭವಿಸುವುದನ್ನು ತಡೆದು ಯಂತ್ರೋಪಕರಣಗಳ ಜೀವನ ಶೈಲಿಯನ್ನು ಉದ್ದೀಪನಗೊಳಿಸುತ್ತದೆ. ಆದರೆ ಸಾಹಿತ್ಯ ಸಾಮರಸ್ಯದ ಪರಿಪೂರ್ಣತೆಯ ಸಂಕೇತ. ಸಾಹಿತ್ಯವು ಹೊತ್ತು ತರುವ ಅಮೂಲ್ಯವಾದ ಪರಿಕಲ್ಪನೆಗಳಿಗೆ ಯಾವುದೇ ಎಲ್ಲೆ ಇಲ್ಲ. ಕಾಲ, ದೇಶದ ಪರಿಮಾಣಗಳನ್ನು ಮೀರಿ ತನ್ನ ಸಾಂಸ್ಕೃತಿಕ ಮಹತ್ವವನ್ನು ಸಾರುತ್ತದೆ. ಸಾಹಿತ್ಯವು ವ್ಯಕ್ತಿಯೊಬ್ಬನ ಕೈಯಲ್ಲಿ ಸೃಷ್ಟಿಯಾಗುವುದಾದರೂ, ಮಾನವನ ಪರಿಪೂರ್ಣತೆಯ ಸಮಗ್ರ ಪರಿಕಲ್ಪನೆಯನ್ನು ಅದು ಹೊಂದಿರುತ್ತದೆ. ಅತಿ ಮುಖ್ಯವಾಗಿ ಸಾಹಿತ್ಯ ಎಲ್ಲ ಕಾಲಕ್ಕೂ ನಮ್ಮನ್ನು ಸೆಳೆಯುತ್ತದೆ. ಆ ಮೂಲಕ ನಮ್ಮನ್ನು ಮೃಗೀಯ ಭಾವನೆಗಳಿಂದ ಬಹುದೂರ ತಂದು ಮಾನವೀಯ ಜೀವಭಾವಗಳನ್ನು ಬಿತ್ತುವ ಕೆಲಸ ಮಾಡುತ್ತದೆ. ನೈತಿಕ ಬೆಳವಣಿಗೆಯ ದೃಷ್ಟಿಯಿಂದ ಕಾವ್ಯಸಾಹಿತ್ಯವು ನೀಡುವ ಬಹುದೊಡ್ಡ ಕೊಡುಗೆ ಎಂದರೆ ನಮ್ಮನ್ನು ಮನುಷ್ಯರನ್ನಾಗಿ ಬದುಕಿಸುವ ಕಲ್ಪನೆಯೇ ಆಗಿದೆ. ಆದ್ದರಿಂದ ಸಾಹಿತ್ಯದ ಸೃಷ್ಟಿಯು ಸರ್ವಸಮ್ಮತವಾದ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ.

ವರ್ತಮಾನಕ್ಕೆ ತಂತ್ರಜ್ಞಾನ ಎಷ್ಟೇ ಸೌಲಭ್ಯವೆಂಬ ಸಿಹಿಯನ್ನು ನೀಡಿದರು ಅದು ಅಂತಿಮದಲ್ಲಿ ಕಹಿಯಾದ ಅನುಭವವೇ ಆಗಿರುತ್ತದೆ. ಕಾರಣ ನಮ್ಮೊಂದಿಗೆ ಯಾಂತ್ರಿಕತೆ ಎನ್ನುವುದು ಮನುಷ್ಯನಾಗಿ ವರ್ತಿಸುವುದಿಲ್ಲ. ಬದಲಾಗಿ ಯಾಂತ್ರಿಕವಾಗಿಯೇ ಮಾತನಾಡುತ್ತದೆ. ಆದರೆ ಸಾಹಿತ್ಯ ನಮ್ಮ ಬದುಕಿಗೆ ಎಲ್ಲ ಕಾಲಕ್ಕೂ ಮನುಷ್ಯನಾಗಿಯೇ ವರ್ತಿಸಿ, ಸಿಹಿ ಅನುಭವವನ್ನೇ ಒದಗಿಸುತ್ತದೆ. ಯಾಕೆಂದರೆ ಸಾಹಿತ್ಯ ಸೃಷ್ಟಿ ಸಾಂಸ್ಕೃತಿಕತೆಯ ಗುರುತರವಾದ ಜವಾಬ್ದಾರಿಗಳಿಂದ ರಚನೆಯಾಗಿರುತ್ತದೆ. ಆದ್ದರಿಂದ ಸಾಹಿತ್ಯ ಲೋಕಜೀವನದ ಮಾನವನ ಸಾಂಸ್ಕೃತಿಕ ಅಭ್ಯುದಯಕ್ಕೆ ದಾರಿಮಾಡಿಕೊಡುತ್ತದೆ. ಈ ಹಿನ್ನೆಲೆಯಿಂದ ಸಾಹಿತ್ಯ ಸಿಹಿತನದ ಸತ್ವ, ಯಂತ್ರೋಪಕರಣಗಳ ಸೌಲಭ್ಯದ ಪ್ರವೃತ್ತಿಗೆ ಹೋಲಿಸಿ ಒಂದು ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ವಿಜ್ಞಾನ ಮತ್ತು ಯಂತ್ರೋಪಕರಣಗಳ ಈ ಯುಗದಲ್ಲಿ ಮಾನವನ ಆಂತರ್ಯವು ಹೃದಯ ಶ್ರೀಮಂತಿಕೆಯನ್ನು, ಸೂಕ್ಷ್ಮಸಂವೇದನೆಗಳನ್ನು ಕಳೆದುಕೊಳ್ಳುತ್ತಿದೆ. ಇದಕ್ಕೆ ಪ್ರಧಾನವಾಗಿ ಅತಿಯಾದ ಧಾವಂತದ ನಮ್ಮ ಆಧುನಿಕ

ಜೀವನ ಶೈಲಿಯೇ ಕಾರಣವಾಗಿದೆ. ನಾವು ಈ ಹಿಂದಿನ ಜೀವನ ಶೈಲಿಯ ನಂಟುತನವನ್ನು ಕಳೆದುಕೊಂಡು ಅಭಿವೃದ್ಧಿಯೆಂಬ ನಾಗಾಲೋಟದಲ್ಲಿ ಸಾಗುವ ನಮ್ಮ ಪ್ರವೃತ್ತಿ ನಮ್ಮನ್ನು ಯಾಂತ್ರಿಕಲೋಕದತ್ತ ತಳ್ಳುತ್ತಿದೆ. ಇದರಿಂದ ದೂರಬಂದು ಸಾಹಿತ್ಯದ ಸಾಂಸ್ಕೃತಿಕ ಮೌಲ್ಯವನ್ನು ಅರಿಯುವ ಅವಶ್ಯಕತೆ ನಮಗೆ ಬೇಕಾಗಿದೆ.

ಒಟ್ಟಾರೆಯಾಗಿ ತಂತ್ರಜ್ಞಾನ ಮತ್ತು ಸಾಹಿತ್ಯದ ಬಹಳ ಮಹತ್ವದ ಅಂಶಗಳನ್ನು ಅರಿಯುವ ಜೊತೆಯಲ್ಲಿ ಈ ಯುಗದ ಜೀವನ ಶೈಲಿಯು ಯಾವ ರೀತಿಯಲ್ಲಿ ಸಾಗುತ್ತಿದೆ ಎಂಬುದನ್ನು ಚರ್ಚಿಸಿದೆವು. ಇಂದಿನ ಯಾಂತ್ರಿಕ ಯುಗದಲ್ಲಿ ನಾವು ಅನಿವಾರ್ಯವಾಗಿ ತಂತ್ರಗಾರಿಕೆಯಿಂದ ಬದುಕಲೇ ಬೇಕಾಗಿದೆ. ಅಂಥ ಸಂದರ್ಭಗಳು ನಮಗೆ ಇಂದು ಎದುರಾಗಿದೆ. ಆದ್ದರಿಂದ ಆ ಬದುಕನ್ನು ಸ್ವೀಕರಿಸಿ ಬಾಳಬೇಕು. ಆದರೆ ನಮ್ಮ ಜೀವನ ಪರಿಪೂರ್ಣತೆಯ ಪ್ರತೀಕವಾಗಿರಬೇಕು. ನಾವು ಎಲ್ಲವನ್ನೂ ಒಳಗೊಂಡು ಬದುಕಬೇಕು. ಅಂದರೆ ತಂತ್ರಜ್ಞಾನವನ್ನು ಬಳಸು, ಆದರೆ ಅದನ್ನು ಮೀರಿ ಬದುಕು ಎಂಬುದೇ ನಮ್ಮ ಮುಂದಿರುವ ಸರ್ವಸತ್ಯ.

**ಪರಾಮರ್ಶನ ಗ್ರಂಥಗಳು:**


1. ಅನಂತರಾಮು ಟಿ. ಆರ್., (2020), ವಿಜ್ಞಾನ ತಂತ್ರಜ್ಞಾನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ರಾಘವೇಂದ್ರ ಎಚ್. ಎಸ್., (2015), ವಿಶ್ಲೇಷಣೆ, ಸುರಭಿ ಪ್ರಕಾಶನ, ಬೆಂಗಳೂರು.
3. ನಾಗಭೂಷಣ ಓ.ಎಲ್. (ಸಂ), (2016), ವಿಜ್ಞಾನ ಸಾಹಿತ್ಯ ನಿರ್ಮಾಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
4. ಶೈಲಜಾ ಬಿ. ಎಸ್. (ಸಂ), (2007), ವಿಜ್ಞಾನ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
5. ತಿರುಮಲೇಶ ಕೆ.ವಿ. (ಅನು), (2018), ಜ್ಞಾನ ವಿಜ್ಞಾನ ತಂತ್ರಜ್ಞಾನ, ಕೇಂದ್ರ ಸಾಹಿತ್ಯ ಅಕಾಡೆಮಿ, ದೆಹಲಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.